**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ. ನಂ. 1472/2023** **ಫ್ರಾ.ಸಾ – 1**
**ಚಾ.ಸಾ – 1**

ದಿನಾಂಕಃ **09.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಸನ್ನ ಕುಮಾರ್ |
| ತಂದೆ ಹೆಸರು | : | ಕುಮಾರ್ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಪೇದೆ |
| ವಾಸ ಸ್ಥಳ | : | ಪೊನ್ನಂಪೇಟೆ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು 2021 ರಿಂದ ಇಲ್ಲಿಯವರೆಗೆ ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿತ್ತಿದ್ದೇನೆ.

ದಿ. 05.09.2023 ರಂದು ನಾನು ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರಿಂದ ಆರೋಪಿ ಹೆಚ್ಚಿನ ಮದ್ಯವನ್ನು ಶೇಖರಿಸಿಕೊಂಡು ಪರವಾನಗಿ ಇಲ್ಲದೆ, ಅಂಗಡಿಯಲ್ಲಿ ಮಾರಾಟ ಮಾಡುತ್ತಿದ್ದಾನೆ ಎಂದು ಸಂಜೆ 06.30 ಗಂಟೆಗೆ ಮಾಹಿತಿ ಬಂದಿರುತ್ತದೆ. ನಾನು ಸಂಜೆ 06.45 ಗಂಟೆಗೆ ಠಾಣೆಗೆ ಹೋಗಿ ಲಿಖಿತ ವರದಿಯನ್ನು ಚಾಸಾ 11 ರವರಿಗೆ ನೀಡಿರುತ್ತೇನೆ. ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನುನಿ. ಪಿ. 1 ಎಂದು, ಸಹಿಯನ್ನು ನಿ. ಪಿ. 1(ಎ) ಎಂದು ಗುರುತಿಸಲಾಯಿತು. ಪ್ರಕರಣ ದಾಖಲಾದ ನಂತರ ಪಂಚರಾದ ಚಾಸಾ 5 ಮತ್ತು 6 ರವರನ್ನು ಬರಮಾಡಿಕೊಂಡು ಅವರಿಗೆ ಈ ಪ್ರಕರಣದ ಬಗ್ಗೆ ಮಾಹಿತಿ ನೀಡಿರುತ್ತೇನೆ. ನಂತರ ಇವರುಗಳ ಜೊತೆ ಚಾಸಾ 2 ರಿಂದ 4 ಮತ್ತು ಚಾಸಾ 11 ರವರ ಜೊತೆ ನಾನು ಆರೋಪಿಯ ಊರಾದ ಬೆಕ್ಕೆ ಸೂಡ್ಲೂರು ಗ್ರಾಮಕ್ಕೆ ಸಂಜೆ 08.00 ಗಂಟೆಗೆ ಹೋದೆವು. ಸ್ವಲ್ಪ ದೂರದಿಂದಲೇ ವಾಹನವನ್ನು ನಿಲ್ಲಿಸಿ ಆರೋಪಿಯ ಮನೆಗೆ ಹೊಂದಿಕೊಂಡಿರುವ ಅಂಗಡಿಯ ಮುಂದೆ ನಡೆದುಕೊಂಡು

ಹೋದೆವು. ಆರೋಪಿ ಅಂಗಡಿಯಲ್ಲಿದ್ದ, ಇಬ್ಬರು ಸಾರ್ವಜನಿಕರಿಗೆ ಮದ್ಯವನ್ನು ಮಾರಾಟ ಮಾಡುತ್ತಿದ್ದ. ನಂತರ ಅಂಗಡಿಯಲ್ಲಿ 90 M. L. 31 cover packets Silver cup original choice ಅಂಗಡಿಯಲ್ಲಿ ಇದ್ದು ಅವುಗಳನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡೆವು. ನ್ಯಾಯಾಲಯದ ಮುಂದೆ ಇರುವ 31 ಅಮಾನತುಪಸಿಡಿಕೊಂಡ ಖಾಲಿ cover packet ಅನ್ನು ಒಟ್ಟಾಗಿ ಮು. ಮಾ. 1 ಎಂದು ಗುರುತಿಸಲಾಯಿತು. ಅಂಗಡಿಯಲ್ಲಿ ಇದ್ದ ರೂ. 100 ಮುಖಬೆಲೆಯ 2 ನೋಟುಗಳು, 50 ಮುಖಬೆಲೆಯ 1 ನೋಟುಗಳನ್ನು ಅಮಾನತುಪಡಿಸಿಕೊಂಡೆವು. ದಿ. 02.03.2023 ಎಂದು ಮಧ್ಯದ packets ಗಳ ಮೇಲೆ ಇದ್ದು, ಬ್ಯಾಚ್ ನಂಬರ್ 018 ಆಗಿರುತ್ತದೆ. ಮಧ್ಯವನ್ನು ಅಮಾನತುಪಡಿಸಿಕೊಂಡು ಸಂಜೆ 08.00 ರಿಂದ 09.00 ಮಹಜರ್ ಅನ್ನು ಬರೆದು ಆರೋಪಿಯ ಜೊತೆ ಠಾಣೆಗೆ ಹೋದೆವು. ಸಾಕ್ಷಿಯು ಮಹಜರ್ ಅನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 2 ಎಂದು, ಸಹಿಯನ್ನು ನಿ ಪಿ. 2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮು. ಮಾ 1 ಮದ್ಯ ಅಂಗಡಿಯಲ್ಲಿ ಸಿಕ್ಕಿತು ಎಂದರೆ ಸರಿ. ನ್ಯಾಯಾಲಯದ ಮುಂದ ಇರುವ ಪ್ಲಾಸ್ಟಿಕ್ ಚೀಲವನ್ನು ನೋಡಿ ಗುರುತಿಸಿದ್ದು ಅದನ್ನು ಮು. ಮಾ 2 ಎಂದು ಗುರುತಿಸಲಾಯಿತು. ಆರೋಪಿಯ ಬಳಿ ಇದನ್ನು ಹೊಂದಲು ಪರವಾನಗಿ ಇರಲಿಲ್ಲ ಎಂದರೆ ಸರಿ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ  ಆರೋಪಿ ಪರ ಶ್ರೀ ಎಸ್. ಡಿ. ಕೆ    ವಕೀಲರಿಂದಃ</u>

ಆರೋಪಿಯ ಮನೆ ಸುತ್ತಮುತ್ತ ಸುಮಾರು ಮನೆಗಳು ಇದೆ ಎಂದರೆ ಸರಿ. ಆರೋಪಿಯ ಮನೆ ಕಾನೂರು ಕುಟ್ಟ ಮುಖ್ಯ ರಸ್ತೆಯಲ್ಲಿ ಇದೆ ಎಂದರೆ ಸರಿ. ಅಂಗಡಿಯ ಬಳಿ ಸುಮಾರು 3  ಗ್ರಾಹಕರಿದ್ದು ಅವರು ಯಾರು ಎಂದು ಗೊತ್ತಿಲ್ಲ. ಆರೋಪಿಯ ಮನೆ  ಮತ್ತು ಅಂಗಡಿ ಒಂದೇ ಕಟ್ಟಡದಲ್ಲಿ ಇದೆ ಎಂದರೆ ಸರಿ. ಅಂಗಡಿ ಮನೆಗೆ ಲಗತ್ತಾಗಿ ಬೇರೆ ಇರುತ್ತದೆ. ಚಾಸಾ 11 ಮು. ಮಾ 1 ಮತ್ತು 2 ಅನ್ನು ಅಂಗಡಿಯಿಂದ ಹೊರತೆಗೆದರು. ನಾನು ಅಂಗಡಿಯ ಎದುರೆ ಇದ್ದೆ. ಚಾಸಾ 11  ಮು. ಮಾ 1 ಎಣಿಸಿದರು ನಾನು ಮಾಡಲಿಲ್ಲ. ಆರೋಪಿಯ ಅಂಗಡಿ ದಿನಸಿ ಅಂಗಡಿ. ಅಂಗಡಿ ಯಲ್ಲಿ ಇದ್ದ ಕ್ಯಾಶ್ ಬಾಕ್ಸ್ ನಿಂದ ಹಣವನ್ನು ಚಾಸಾ 11 ರವರು ತೆಗೆದುಕೊಂಡರು. ಯಾವ ವಸ್ತು ಮಾರಾಟಮಾಡಿ ಆ ಹಣ ಸಂಪಾದನೆ ಮಾಡಿದ್ದನು ಗೊತ್ತಿಲ್ಲ. ಸ್ಥಳದಲ್ಲಿ ಪಂಚರಾಗಲು ಯಾರನ್ನು ಕೋರಲಿಲ್ಲ.  ಆರೋಪಿ  ವಿರುದ್ದ ಅಂಕಿ ಅಂಶಗಳಿಗೋಸ್ಕರ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ನಿ. ಪಿ. 1 ಮತ್ತು 2 ಈ ಪ್ರಕರಣದ ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ಮು. ಮಾ 1 ಮತ್ತು 2 ಅನ್ನು ಆರೋಪಿ ಕಡೆಯಿಂದ ವಶಪಡಿಸಿಕೊಂಡಿಲ್ಲ  ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

ಮರು ವಿಚಾರಣೆಃ ಇಲ್ಲ.

Sd/xxx-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.